


# ಟೆರೇಸ್ ಮೇಲೆ ಕುಳಿತ ಒಬ್ಬಂಟಿ..!

"ನನ್ನ ಸಿನಿಮಾದಲ್ಲಿ ನಾನು ಒಬ್ಬ ರಾಜ್‌ನನ್ನೋ, ಒಬ್ಬ ರಾಹುಲ್‌ನನ್ನೋ ವೈಭವೀಕರಿಸುತ್ತೇನೆ. ಪ್ರೇಮವನ್ನು ವೈಭವೀಕರಿಸುತ್ತೇನೆ. ಅದ್ಯಾರೋ ಮಹಿಳೆ ನನಗೆ ಸಮಾರಂಭವೊಂದರಲ್ಲಿ ಸಿಕ್ಕು ಹೇಳುತ್ತಾಳೆ– 'ನನ್ನ ಗಂಡ ದಿಲ್‌ವಾಲೇ ದುಲ್ಹನಿಯಾ ಲೇ ಜಾಯೆಂಗೆ ಸಿನಿಮಾದ ರಾಜ್‌ನಂತೆ ಇದ್ದಾನೆಂದು ಭಾವಿಸಿ ಮದುವೆಯಾದೆ, ಆದರೆ ಅವನು ಹಾಗಿಲ್ಲ'. ಆಕೆಯ ನಿರಾಶೆಗೆ ನಾನು ಏನು ಹೇಳಲಿ? ಅದಕ್ಕೆ ನಾನು ಹೇಗೆ ಕಾರಣನಾಗುತ್ತೇನೆ? ಇದನ್ನು ಕೆಟ್ಟ ಅಭಿರುಚಿ ಎನ್ನಲಾದೀತೆ? ಸಿನಿಮಾ ನೋಡುವ ಪ್ರೇಕ್ಷಕನಿಗೆ ಅದು ಕೇವಲ ಸಿನಿಮಾ ಎನ್ನುವುದು ಗೊತ್ತಿರಬೇಕು. ಆತ ಅಥವಾ ಆಕೆ ಅಷ್ಟು ಸೂಕ್ಷ್ಮ ಮನಸ್ಸಿನವರಾಗಿರಬೇಕು. ನನಗೆ ರೋಲ್ ಮಾಡೆಲ್ ಆಗುವುದರಲ್ಲಿ ನಂಬಿಕೆಯಿಲ್ಲ. ಕೆಲವೊಮ್ಮೆ ನನ್ನ ಕೆಟ್ಟ/ ಸಿಟ್ಟಿನ ಮುಖವನ್ನು ಪ್ರದರ್ಶಿಸುತ್ತೇನೆ. ಅದು ಪರಿಸ್ಥಿತಿ ಉಂಟು ಮಾಡಿದ ಒತ್ತಡಕ್ಕೆ ಪ್ರತಿಕ್ರಿಯೆಯಾಗಿರುತ್ತದೆ..."

"ನಾನೊಬ್ಬ ಸ್ಟಾರ್ ಆಗಲೀ, ಮೆಗಾಸ್ಟಾರ್ ಆಗಲೀ, ಸೂಪರ್‌ಸ್ಟಾರ್ ಆಗಲೀ ಅಲ್ಲ. ನನ್ನ ಸಂಪರ್ಕಕ್ಕೆ ಬಂದ ಪ್ರತಿಯೊಬ್ಬನೂ ಸಂತೋಷವಾಗಿರಬೇಕು ಎಂದಷ್ಟೆ ನಾನು ಬಯಸುತ್ತೇನೆ. ನೀವು ಪ್ರತಿರೋಧ ಮಾಡಲಾಗದಂತಹ ಒಂದು ಅನುಭವವಷ್ಟೇ ನಾನು."

"ನನ್ನ ಕೆಲಸವನ್ನು ನಾನು ಪ್ರೀತಿಸುತ್ತೇನೆ. ಅದು ನನಗೆ ಎಲ್ಲವನ್ನೂ ಕೊಟ್ಟಿದೆ. ನನಗೊಂದು ಪ್ರೀತಿಪಾತ್ರ ಕುಟುಂಬವಿದೆ. ಆದರೂ ಕೆಲವೊಮ್ಮೆ ಮನೆಯ ಟೆರೇಸ್ ಮೇಲೆ ಒಬ್ಬಂಟಿಯಾಗಿ ಕುಳಿತು ದುಃಖ ಪಡುತ್ತೇನೆ. ಅದು ನನ್ನನ್ನು ಹತಾಶನನ್ನಾಗಿ ಮಾಡುತ್ತದೆ. ಇಲ್ಲ... ಎದ್ದು ಬಿಡು ಎಂದು ನನಗೆ ನಾನೇ ಅಂದುಕೊಳ್ಳುತ್ತೇನೆ..."

"ನನ್ನನ್ನು ಟೀಕಿಸುವವರು ಎಲ್ಲ ಕಡೆಯೂ ಇದ್ದಾರೆ. ಅವರಿಗೆ ಸಂತೋಷ ಸಿಗುವುದಾದರೆ ನನಗೂ ಸಂತೋಷವೇ. ಅವರಿಗೆ ಸಿಗುವ ಸಂತೋಷವನ್ನು ನಾನಾದರೂ ಏಕೆ ತಪ್ಪಿಸಲಿ? ಜಗತ್ತಿನ ಎಲ್ಲ ದೇಶಗಳಲ್ಲಿ , ಅಮೆರಿಕಾ, ರಶ್ಯಾ, ಚೀನಾ, ಯೂರೋಪ್ ಎಲ್ಲೆಡೆ ಜನ ನನ್ನನ್ನು ಬಹುವಾಗಿ ಪ್ರೀತಿಸುತ್ತಾರೆ. ಆದರೆ ದುಃಖದ ಸಂಗತಿಯೆಂದರೆ ನನ್ನ ಜನರೇ ನನ್ನನ್ನು ಸ್ವಲ್ಪ ಕಡಿಮೆ ಪ್ರೀತಿಸೋದು.."

–ಶಾರೂಕ್ ಖಾನ್ ಎಂಬ 'ಬಾಲಿವುಡ್ ಬಾದ್‌ಷಾ'ನ ಮನದಾಳದ ಮಾತುಗಳಿವು. 'ಡಾನ್–2' ಚಿತ್ರದ 'ಸೂಪರ್ ಸಕ್ಸೆಸ್' ಬಳಿಕ ನೀಡಿದ ಸಂದರ್ಶನದಲ್ಲಿ ಶಾರೂಕ್ ಹೀಗೆ ನಿರುಮ್ಮಳನಾಗಿ ಲಹರಿ ಹರಿಯಬಿಟ್ಟಿದ್ದಾನೆ. ಶಾರೂಕ್ ಬುದ್ಧಿವಂತ ಎನ್ನುವುದರಲ್ಲಿ ಎರಡು ಮಾತೇ ಇಲ್ಲ!

ಲಹರಿ ಏನೇ ಇರಲಿ; ಬಾಕ್ಸಾಫೀಸ್ ಶಾರೂಕ್ ಪರವಾಗಿದೆ. 'ಡಾನ್–2' ಸಿನಿಮಾ ಬಿಡುಗಡೆಯಾದ ಎರಡೇ ವಾರಗಳಲ್ಲಿ 100 ಕೋಟಿಯ ಗಳಿಕೆಯನ್ನು ದಾಟಿದೆ. ಮಾತ್ರವಲ್ಲ, ಮೂರನೇ ವಾರದಲ್ಲೂ ಅತ್ಯಧಿಕ ಗಳಿಕೆಯನ್ನು ದಾಖಲಿಸುತ್ತಾ ಮುನ್ನುಗ್ಗಿದೆ. ಭಾರತದಲ್ಲಿ ಮಾತ್ರವಲ್ಲ, ದೂರದ ಅಮೆರಿಕಾದಲ್ಲೂ ಈ ಚಿತ್ರದ ಗಳಿಕೆ ಹೊಸ ದಾಖಲೆ ನಿರ್ಮಿಸಿದೆ. ಅಲ್ಲಿ ಬಿಡುಗಡೆಯಾದ ಮೊದಲ ವಾರದಲ್ಲಿ 3.3 ದಶಲಕ್ಷ ಡಾಲರ್ ಗಳಿಕೆ ಸಾಧಿಸಿರುವುದು ಇದು ಭಾರತೀಯ ಸಿನಿಮಾವೊಂದು ಅಮೆರಿಕದಲ್ಲಿ ಗಳಿಸಿದ ಅತ್ಯಧಿಕ ಹಣ ಎನ್ನಲಾಗಿದೆ. ಈ ಹಿಂದೆ ಶಾರೂಕ್ ಅಭಿನಯದ 'ಮೈ ನೇಮ್ ಈಸ್ ಖಾನ್' ಹೆಸರಿನಲ್ಲಿ ಇದ್ದ ಅಮೆರಿಕಾದ ಗಳಿಕೆಯ ದಾಖಲೆಯನ್ನೂ ಡಾನ್–2 ಮುರಿದಿದೆ!

■ ಬಿಂದು